# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮ ಪಂಚಾಯತಿಗಳು ಕೈಗಾರಿಕೆಗಳಿಗೆ ವಿಧಿಸುತ್ತಿರುವ ತೆರಿಗೆ ಹಾಗೂ ಫೀಜುಗಳು ಬಗ್ಗೆ- ಸಮಸ್ಯೆಗಳ ಬಗ್ಗೆ ಚರ್ಚಿಸಿ ವರದಿ ನೀಡಲು ಸಮಿತಿಯನ್ನು ರಚಿಸುವ ಬಗ್ಗೆ.

**ಓದಲಾಗಿದೆ:**
1. ಕರ್ನಾಟಕ ಸಣ್ಣ ಕೈಗಾರಿಕಾ ಸಂಘದ ಮನವಿ ದಿನಾಂಕ:21-07-2017.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 939 ಗ್ರಾಪಂಅ 2016 (ಭಾಗ-1) ದಿನಾಂಕ:19-11-2016.

**ಪ್ರಸ್ತಾವನೆ:**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 199, 199ಎ ಹಾಗೂ ಅನುಸೂಚಿ-IV ರಲ್ಲಿ ಗ್ರಾಮ ಪಂಚಾಯತಿಗಳು ತೆರಿಗೆ ಮತ್ತು ಫೀಜುಗಳನ್ನು ವಿಧಿಸಲು ಹಾಗೂ ಪರಿಷ್ಕರಿಸಲು ಮತ್ತು ವಸೂಲಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಪ್ರಕರಣಗಳನ್ವಯ ತೆರಿಗೆಯನ್ನು ಸ್ವತ್ತಿನ ಮೂಲಮೌಲ್ಯದ ಮೇಲೆ ತೆರಿಗೆ ವಿಧಿಸಲು ಹಾಗೂ **"ಅನುಮತಿ ಪತ್ರ"** ನೀಡಲು ವಿಧಿಸಬೇಕಾದ ಫೀಜುಗಳನ್ನು ನಿರ್ಧರಿಸಲು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲು ಹಾಗೂ ಆ ಸಮಿತಿಯಲ್ಲಿ ಚರ್ಚಿಸಿ ನಿರ್ಧರಿಸಿದ ಆಧಾರದ ಮೇಲೆ ಗ್ರಾಮ ಪಂಚಾಯತಿಗಳು ತೆರಿಗೆ ಮತ್ತು ಫೀಜುಗಳನ್ನು ವಿಧಿಸಲು ಅನುಸರಿಸಬೇಕಾದ ವಿಧಿವಿಧಾನಗಳನ್ನು ಉಲ್ಲೇಖ(1) ರಲ್ಲಿನ ಸುತ್ತೋಲೆಯಲ್ಲಿ ಸವಿವರವಾಗಿ ತಿಳಿಸಲಾಗಿದೆ.

ಆದಾಗ್ಯೂ ಕೆಲವು ಗ್ರಾಮ ಪಂಚಾಯತಿಗಳು ಕೈಗಾರಿಕೆ ಕಟ್ಟಡ ಮತ್ತು ಪ್ರದೇಶಗಳ ಮೇಲೆ ನಿಯಮಬದ್ಧವಾಗಿ ತೆರಿಗೆ ಮತ್ತು ಫೀಜುಗಳನ್ನು ವಿಧಿಸುತ್ತಿಲ್ಲದಿರುವ ಬಗ್ಗೆ ಹಾಗೂ ತೆರಿಗೆಗಳನ್ನು ವಸೂಲಿ ಮಾಡಲು ಅನುಸರಿಸುತ್ತಿರುವ ಅತಿಯಾದ ವರ್ತನೆಗಳ ಬಗ್ಗೆ ಸರ್ಕಾರಕ್ಕೆ ಕೈಗಾರಿಕಾ ಸಂಘದವರಿಂದ ಮತ್ತು ಇತರೆ ಮೂಲಗಳಿಂದ ದೂರುಗಳು ಬಂದಿರುತ್ತವೆ. ಈ ಎಲ್ಲಾ ಸಮಸ್ಯೆಗಳನ್ನು ಸಮಗ್ರವಾಗಿ ಪರಿಶೀಲಿಸಲು ಹಾಗೂ ಚರ್ಚಿಸಿ ಸೂಕ್ತ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು (ಪಂ.ರಾಜ್-1) ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸರ್ಕಾರ ರಚಿಸಲು ಉದ್ದೇಶಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 481 ಗ್ರಾಪಂಅ 2016,**
**ಬೆಂಗಳೂರು. ದಿನಾಂಕ: 26-09-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮ ಪಂಚಾಯತಿಗಳು ಕೈಗಾರಿಕೆಗಳಿಗೆ ವಿಧಿಸುತ್ತಿರುವ ತೆರಿಗೆ ಹಾಗೂ ಫೀಜುಗಳ ಬಗ್ಗೆ ವಿವರವಾಗಿ ಚರ್ಚಿಸಿ, ಸೂಕ್ತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕೆಳಕಂಡ ಸಮಿತಿಯನ್ನು ರಚಿಸಿ ಆದೇಶಿಸಿದೆ.

| ಕ್ರ.ಸಂ. | ಹೆಸರು | ಪದನಾಮ |
|---|---|---|
| 1 | ಶ್ರೀ ಎಂ.ಕೆ. ಕೆಂಪೇಗೌಡ,<br>ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. | ಅಧ್ಯಕ್ಷರು |
| 2 | ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ. ಇವರ ಪ್ರತಿನಿಧಿ. | ಸದಸ್ಯರು |
| 3 | ಶ್ರೀ ಆರ್. ರಮೇಶ್,<br>ನಿರ್ದೇಶಕರು (ತಾಂತ್ರಿಕ ಕೋಶ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ. | ಸದಸ್ಯರು |
| 4 | ಶ್ರೀ ರಾಜಗೋಪಾಲ್, ಕಾಸಿಯಾ ಪ್ರತಿನಿಧಿ. | ಸದಸ್ಯರು |
| 5 | ಶ್ರೀ ಪುಟ್ಟರಾಜ್, ಕಾಸಿಯಾ ಪ್ರತಿನಿಧಿ. | ಸದಸ್ಯರು |
| 6 | ಶ್ರೀ ವಸಂತ ಲದ್ವಾ, ಎಫ್ ಕೆ ಸಿ ಸಿ ಐ., ಪ್ರತಿನಿಧಿ | ಸದಸ್ಯರು |
| 7 | ಶ್ರೀ ಆನಂದ ಪೂತ್ನೀಸ, ಗದಗ ಚೇಂಬರ್ ಆಫ್ ಕಾಮರ್ಸ್, | ಸದಸ್ಯರು |
| 8 | ಶ್ರೀ ಹೆಚ್.ಎಸ್.ಶೆಟ್ಟಿ, ಅಧ್ಯಕ್ಷರು, ವಿಂಡ್ ಎನರ್ಜಿ ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್ ಅಸೋಸಿಯೇಷನ್, (ರಿ) | ಸದಸ್ಯರು |

ಮೇಲೆ ತಿಳಿಸಿರುವ ಸಮಿತಿಯು ವರದಿಯನ್ನು ಒಂದು ತಿಂಗಳೊಳಗೆ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ. ಸಮಿತಿಯು ಅವಶ್ಯವೆನಿಸುವ ಅಧಿಕಾರಿಗಳಿಂದ ಮಾಹಿತಿ ಪಡೆಯಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಪ್ರತಿ:</u>

1. ಶ್ರೀ ಎಂ.ಕೆ. ಕೆಂಪೇಗೌಡ, ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ., ರಾಜಾಜಿನಗರ, ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು.
3. ನಿರ್ದೇಶಕರು (ತಾಂತ್ರಿಕ ಕೋಶ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸ ಸೌಧ, ಬೆಂಗಳೂರು
4. ಶ್ರೀ ರಾಜಗೋಪಾಲ್, ಕಾಸಿಯಾ ಪ್ರತಿನಿಧಿ, ನೆಲಮಂಗಲ.
5. ಶ್ರೀ ಪುಟ್ಟರಾಜ್, ಕಾಸಿಯಾ ಪ್ರತಿನಿಧಿ, ಮಂಡ್ಯ.
6. ಶ್ರೀ ವಸಂತ ಲದ್ವಾ, ಅಧ್ಯಕ್ಷರು, ಎಫ್ ಕೆ ಸಿ ಸಿ ಐ.,
7. ಶ್ರೀ ಆನಂದ ಪೂತ್ನೀಸ, ಗದಗ ಚೇಂಬರ್ ಆಫ್ ಕಾಮರ್ಸ್, ಹುಬ್ಬಳ್ಳಿ-ಧಾರವಾಡ.
8. ಶ್ರೀ ಹೆಚ್.ಎಸ್.ಶೆಟ್ಟಿ, ಅಧ್ಯಕ್ಷರು, ವಿಂಡ್ ಎನರ್ಜಿ ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್ ಅಸೋಸಿಯೇಷನ್, (ರಿ), ನಂ. 201 ಮತ್ತು 202, 2ನೇ ಮಹಡಿ, ಶ್ರೀಸ್ತ ಭೂಮಿ ನಂ. 87. ಕೆ.ವಿ.ರೋಡ್, ಬಸವನಗುಡಿ, ಬೆಂಗಳೂರು.

<u>ಪ್ರತಿಗಳು:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಗೌರವ ಅಧ್ಯಕ್ಷರು, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, ನಂ.2/106, 17ನೇ ಕ್ರಾಸ್, ಮಾಗಡಿ ಕಾರ್ಡ್ ರೋಡ್, ವಿಜಯನಗರ, ಬೆಂಗಳೂರು.
6. ಕೋಆರ್ಡಿನೇಟರ್, ಇಂಡಿಯನ್ ವಿಂಡ್ ಪವರ್ ಅಸೋಸಿಯೇಷನ್ ನಂ.50, ಮಿಲಿನಿಯಂ ಟವರ್ಸ್, ಕ್ವೀನ್ಸ್ ರೋಡ್, ಬೆಂಗಳೂರು-51.
7. ಅಧ್ಯಕ್ಷರು, ಎ.ಕೆ.ಸಿ.ಸಿ.ಐ., ಬೆಂಗಳೂರು.
8. ಕಾರ್ಯಾಧ್ಯಕ್ಷರು, ಕರ್ನಾಟಕ ಪಂಚಾಯತ್ ಪರಿಷತ್, ನಂ.186/6, ಶಿರೂರು ಪಾರ್ಕ್ ರಸ್ತೆ, ನಟರಾಜ ಟಾಕೀಸ್ ಎದುರು, ಶೇಷಾದ್ರಿಪುರಂ, ಬೆಂಗಳೂರು-560020.
9. ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.